SC:5/2024
PW:07 CW:12

ಕರ್ನಾಟಕ ಸರ್ಕಾರ (ಸಿ.ಆರ್.ಪಿ67)

| |
|---|
| ಹೇಳಿಕೆ ಹಾಳೆ<br>ಆರ್.ಪಿ. ಸಂಖ್ಯೆ57<br>ನಮೂನೆ ಸಂಖ್ಯೆ4<br>(ಸಿವಿಲ್) |

# 3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ

## ಸತ್ರ ಪ್ರಕರಣ ಸಂಖ್ಯೆ: 5/2024

| | |
|---|---|
| PW | 07 |
| CW | 12 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಬೋಧನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ** 27.07.2026.

| | | |
|---|---|---|
| ಸಾಕ್ಷಿಯ ಹೆಸರು | : | ಸುರೇಶ್ .ಕೆ.ವಿ |
| ತಂದೆಯ ಹೆಸರು | : | ವೆಂಕಟರಾಮಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕಮರವಾರಪಲ್ಲಿ ಗ್ರಾಮ |

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಮೃತ ನಿರ್ಮಲ ನನಗೆ ಗೊತ್ತು. ಚಾಸಾ.1,6,8,9,10,13 ಗೊತ್ತು , ಚಾಸಾ.2,3,4,5,7,11, 14 ರವರು ಗೊತ್ತಿಲ್ಲ .ಈ ದಿನ ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತರ ಪರಿಚಯ ಇರುತ್ತದೆ.

2. ಈ ನಾನು ನೋಡುತ್ತಿರುವ ಕೃತ್ಯ ನಡೆದ ಸ್ಥಳದ ಪಂಚನಾಮೆಯಲ್ಲಿರುವ ಸಹಿ ನನ್ನದೇ ಇರುತ್ತದೆ . ಸಾಕ್ಷಿಯು ಗುರುತಿಸಿದ ಸಹಿ ಇರುವ ಪಂಚನಾಮೆಯನ್ನು ಈಗಾಗಲೇ ನಿಪಿ.2 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.2 (ಬಿ) ಎಂದು ಗುರುತಿಸಲಾಯಿತು. ಸುಮಾರು 6 ವರ್ಷಗಳ ಹಿಂದೆ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ . ನಿಪಿ.2 ಕ್ಕೆ ನನ್ನ ಜೊತೆ ಚಾಸಾ.13 ರವರು ಸಹಿ ಮಾಡಿರುತ್ತಾರೆ .ಈಗ ನನಗೆ ತೋರಿಸುತ್ತಿರುವ

ನಿಪಿ.3 ಮತ್ತು 4 ರಲ್ಲಿರುವ ಫೋಟೋಗಳನ್ನು ಬಾಗೇಪಲ್ಲಿನ 3 ನೇ ವಾರ್ಡ್ ನಮ್ಮ ಪಕ್ಕದ ಮನೆಯಲ್ಲಿ ತೆಗೆಯಲಾಗಿರುತ್ತದೆ . ಸದರಿ ಫೋಟೋದಲ್ಲಿರುವವರು ಮೃತ ನಿರ್ಮಲ ಇರುತ್ತಾರೆ . ನಿಪಿ.2 ಕ್ಕೆ ಸಹಿ ಮಾಡುವ ಕಾಲದಲ್ಲಿ ಬಹಳ ಜನರು ಬಂದಿದ್ದರು ನಾನು ಅಲ್ಲಿಗೆ ಹೋಗಿದ್ದೆನು. ಮೃತ ನಿರ್ಮಲಳು ನೇಣು ಹಾಕಿಕೊಂಡು ಕೈನಲ್ಲಿ ಪೇಪರ್ ಹಿಡಿದುಕೊಂಡಿದ್ದಳು . ನಿಪಿ.2 ಕ್ಕೆ ನನ್ನ ಸಹಿಯನ್ನು ಮೃತ ನಿರ್ಮಲಳ ತಮ್ಮ ಚಾಸಾ.1 ರವರು ತೆಗೆದುಕೊಂಡಿರುತ್ತಾರೆ .

3. ನಿಪಿ.2 ಕ್ಕೆ ಸಹಿ ಮಾಡಿದಾಗ ಬೆ.11.00 ರಿಂದ 12.00 ಗಂಟೆ ಸಮಯ ಆಗಿರುತ್ತದೆ . ನಂತರ ಮೃತ ನಿರ್ಮಲಳನ್ನು ಸ್ಥಳದಿಂದ ತೆಗೆದುಕೊಂಡು ಆಸ್ಪತ್ರೆಗೆ ಕಳುಹಿಸಲಾಗಿರುತ್ತದೆ . ಮನೆಯಲ್ಲಿರುವ ಕಿಟಕಿಗೆ ಮೃತ ನಿರ್ಮಲಳು ವೇಲಿನಿಂದ ನೇಣು ಹಾಕಿಕೊಂಡಿದ್ದು ವಿಷಯ ಗೊತ್ತಾಗಿ ನಾವು ಅಲ್ಲಿಗೆ ಹೋಗಿದ್ದೆವು . ಸದರಿ ವೇಲನ್ನು ನೋಡಿದರೆ ಗುರುತಿಸುತ್ತೇನೆ . ಈಗ ನನಗೆ ತೋರಿಸುತ್ತಿರುವ ಮುಮಾ.1 ರಲ್ಲಿರುವ ವೇಲನ್ನು ನಾನು ಸ್ಥಳದಲ್ಲಿ ನೋಡಿರುತ್ತೇನೆ .

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ . ಹೆಚ್.ಆರ್.ವಿ ವಕೀಲರಿಂದಃ</u>**

4. ನಿಪಿ.2 ರಲ್ಲಿ ಏನು ಬರೆಯಲಾಗಿದೆ ಎಂಬ ವಿಷಯ ನನಗೆ ಗೊತ್ತಿರುವುದಿಲ್ಲ . ನಿಪಿ.2 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿಯೇ ಸಹಿ ಮಾಡಿರುತ್ತೇನೆ ಎಂದರೆ ನಿಜ . ಮುಮಾ.1 ರಲ್ಲಿರುವ ವೇಲನ್ನು ನಾನು ಸ್ಥಳದಲ್ಲಿ ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**<u>ಮರುವಿಚಾರಣೆಃ</u> ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ದಿನಾಂಕ** 27.07.2026 **ರಂದು ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಿಸಲಾಯಿತು** )

ಓದಿ ಹೇಳಿ ಕೇಳಿ ಸರಿ ಇದೆ

sd/-

**(ಸಿದ್ದಣ್ಣ.ಬಿ.ಹಂದ್ರಾಳ)**

ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಬಳ್ಳಾಪುರ.